ದಿನಾಂಕಃ02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎಲ್ ವಿ ಆರ್ ವಕೀಲರಿಂದ,

1) ವಾದಿಯರು ಈ ದಾವೆಯನ್ನು ಸರ್ವೆ ನಂಬರ್ 290 ಆಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ದಾವಾ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ನಾಲೆ ಎಂದರೆ ಸರಿ. ಪಶ್ಚಿಮಕ್ಕೆಃ ಕೆಂಪೇಗೌಡರವರ ಜಮೀನು ಎಂದರೆ ಸರಿ. ಉತ್ತರಕ್ಕೆಃ ಕೆಂಪೇಗೌಡರವರ ಮಕ್ಕಳಾದ ಸಣ್ಣಸ್ವಾಮಿಗೌಡರವರ ಜಮೀನು ಎಂದರೆ ಸಾಕ್ಷಿಯು ಉತ್ತರಕ್ಕೆ ಸಣ್ಣೇಗೌಡರ ಜಮೀನು ಬರುತ್ತದೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆಃ ಸಿದ್ದೇಗೌಡರವರ ಜಮೀನು ಎಂದರೆ ಸರಿ. ವಾದಿಯ ತಂದೆಯ ಹೆಸರು ಎಳೀರೇಗೌಡ ಎಂದರೆ ಸಾಕ್ಷಿಯು ವಾದಿಯ ತಂದೆಯನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಾತನ ಹೆಸರು ಕರಿಸಣ್ಣೇಗೌಡ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮುತ್ತಾತನ ಹೆಸರು ಕರಿಗೌಡ ಬಿನ್ ಕುಂಟ ಎಂದರೆ ನನಗೆ ಗೊತ್ತಿಲ್ಲ.

2) ದಾವಾ ಸ್ವತ್ತು ವಾದಿಯರ ತಂದೆಯ ವಾರಸುದಾರರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ವಾದಿಯರು ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತು ನನ್ನ ಮುತ್ತಜ್ಜಿ ಪುಟ್ಟೀರಮ್ಮನವರಿಗೆ ದಾನಪತ್ರದ ಮೂಲಕ ಬಂದಿರುತ್ತದೆ. ನಮ್ಮ ಕುಟುಂಬಕ್ಕೆ ಸೇರಿದ ವಂಶವೃಕ್ಷವನ್ನು ಹಾಜರು ಪಡಿಸಿರುವುದಿಲ್ಲ. ದಾನಪತ್ರದ ಮೂಲ ಪ್ರತಿ ಮನೆಯಲ್ಲಿರುತ್ತದೆ. ಸದರಿ ಮೂಲ ಪ್ರತಿಯನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ದಾನಪತ್ರದಲ್ಲಿ ಸರ್ವೆ ನಂಬರ್ 68 ಮತ್ತು 69 ಎಂದು ನಮೂದಾಗಿರುತ್ತದೆ. ದಾನಪತ್ರದಲ್ಲಿ ವಿಸ್ತೀರ್ಣ 2 ಎಕರೆ ನಮೂದಾಗಿರುತ್ತದೆ. ಸರ್ವೆ ನಂಬರ್ 68 ಮತ್ತು 69 ರಲ್ಲಿ ಒಟ್ಟು ವಿಸ್ತೀರ್ಣ 8 ಎಕರೆ 30 ಗುಂಟೆ ಇರುತ್ತದೆ. ದಾನಪತ್ರದಂತೆ ಖಾತೆ ಬದಲಾವಣೆಗೆ ಕಂದಾಯ ದಾಖಲಾತಿಗನ್ನು ಹಾಜರುಪಡಿಸಿರುವುದಿಲ್ಲ. ಪುಟ್ಟೀರಮ್ಮರವರ ಗಂಡನ ಹೆಸರು ಗೊತ್ತಿರುವುದಿಲ್ಲ.

3) ಕರಿಸಣ್ಣೇಗೌಡ ಎಂಬುವವರು ಪುಟ್ಟೀರಮ್ಮನವರಿಗೆ ದಾನಪತ್ರ ಬರೆದುಕೊಟ್ಟಿರುತ್ತಾರೆ. ಕರಿಸಣ್ಣೇಗೌಡರವರ ತಂದೆಯ ಹೆಸರು ಕರಿಗೌಡ ಎಂದರೆ ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂಬರ್ ಮತ್ತು ದಾನಪತ್ರದಲ್ಲಿ ನಮೂದು ಮಾಡಿರುವ ಆಸ್ತಿಯು ಬೇರೆ ಬೇರೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 68 ಮತ್ತು 69 ಪೋಡಾಗಿ ಸರ್ವೆ ನಂಬರ್ 289 ಮತ್ತು 290 ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 68 ಮತ್ತು 69 ಪೋಡಾಗಿರುವ ಬಗ್ಗೆ ಸರ್ವೆ ದಾಖಲೆ ಇರುತ್ತದೆ. ಸರ್ವೆ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಗ್ರಾಮ ನಕ್ಷೆದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕರಿಸಣ್ಣೇಗೌಡ ಮತ್ತು ಪುಟ್ಟೀರಮ್ಮ ಸಹೋದರ ಮತ್ತು ಸಹೋದರಿಯರು. ದಾನಪತ್ರದಲ್ಲಿ ಪುಟ್ಟೀರಮ್ಮ ಮತ್ತು ಕರಿಸಣ್ಣೇಗೌಡರವರ ಸಂಬಂಧದ ಬಗ್ಗೆ ನಮೂದು ಮಾಡಿರುತ್ತಾರೆ.

4) ಸರ್ವೆ ನಂಬರ್ 68 ಮತ್ತು 69 ಕ್ಕೆ ಸಂಬಂಧಿಸಿದ ಕಂದಾಯ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ಸರ್ವೆ ನಂಬರ್ ಆಸ್ತಿ 1991-1992 ನೇ ಸಾಲಿನಲ್ಲಿ ದುರಸ್ಥಿಯಾಗಿರುತ್ತದೆ. ಗವಿಗೌಡ ರವರ ಮಗ ಮರಿಗೌಡ ಎಂದರೆ ನನ್ನ ತಾತ. ನನ್ನ ತಾತ ಮರಿಗೌಡ ಪುಟ್ಟೀರಮ್ಮನವರ ಮೊಮ್ಮಗ. ನಿಶಾನೆ ಪಿ 13 ದಾಖಲೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸರ್ವೆ ನಂಬರ್ 68 ಮತ್ತು 69 ಆಸ್ತಿಯ ಚಕ್ಕುಬಂದಿಯ ಪೂರ್ವಕ್ಕೆ: ಓಣಿ, ಪಶ್ಚಿಮಕ್ಕೆ:ಅರಕೆರೆ ಕೆಂಪೇಗೌಡರ ಜಮೀನು, ಉತ್ತರಕ್ಕೆ:ಮೂಗೂರು ಅಜ್ಜಿಯವರ ಜಮೀನು ಮತ್ತು ದಕ್ಷಿಣಕ್ಕೆ:ಸಣ್ಣೇಗೌಡರವರ ಜಮೀನು ಇತ್ತು. ನಮ್ಮ ಕುಟುಂಬಕ್ಕೂ ಮತ್ತು ಪುಟ್ಟೀರಮ್ಮನವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

5) ನಿಶಾನೆ ಡಿ 2 ಕ್ರಯಪತ್ರವನ್ನು ಸಣ್ಣೇಗೌಡರವರು ಅವರ ತಮ್ಮ ಗಾಡಿಮೂಟೇಗೌಡರವರಿಗೆ ಬರೆದುಕೊಟ್ಟಿರುತ್ತಾರೆ.

ಸದರಿಯವರ ವಂಶವೃಕ್ಷವನ್ನು ಹಾಜರು ಪಡಿಸಿರುವುದಿಲ್ಲ ಮತ್ತು ಸದರಿಯವರಿಗೂ ಮತ್ತು ನಮ್ಮ ಕುಟುಂಬಕ್ಕು ಯಾವುದೇ ಸಂಬಂಧ ಇರುವುದಿಲ್ಲ. ನಿಶಾನೆ ಡಿ 2 ಕ್ರಯಪತ್ರದಲ್ಲಿ ನಮೂದು ಮಾಡಿರು ಚಕ್ಕುಬಂದಿ ಪೂರ್ವಕ್ಕೆ: ಕಾಳೇಗೌಡರ ಜಮೀನು, ಪಶ್ಚಿಮಕ್ಕೆ: ಸಣ್ಣೇಗೌಡರವರ ತಮ್ಮನ ಜಮೀನು, ಉತ್ತರಕ್ಕೆ: ಕರಿಸಣ್ಣೇಗೌಡರವರ ಜಮೀನು, ದಕ್ಷಿಣಕ್ಕೆ: ಕಿವುಡ ಸಿದ್ದೇಗೌಡರವರ ಜಮೀನು ಇರುತ್ತದೆ. ಕ್ರಯಪತ್ರದಲ್ಲಿ ನಮೂದು ಮಾಡಿರುವ ಚಕ್ಕುಬಂದಿಯಲ್ಲಿ ನಮ್ಮ ಕುಟುಂಬದವರ ಪೂರ್ವಜರ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಪೂರ್ವಕ್ಕೆ ಇರುವ ಹೊನ್ನೇಗೌಡರವರ ಮಗ ಕಾಳೇಗೌಡರವರು ನನ್ನ ಅಜ್ಜಿಯ ತಂದೆ ಆಗಿರುತ್ತಾರೆ. ನಮ್ಮ ಕುಟುಂಬ ಸದಸ್ಯರಿಗೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲು ವಿಚಾರಣೆಗಾಗಿ ಕಾಲವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ